ಗೌರವಾನ್ವಿತ ರಾಜ್ಯಪಾಲರು ಕಳುಹಿಸಿರುವ ಮೇಲ್ಮನವಿ ಸಚಿವಾಲಯದಲ್ಲಿ ಬಾಕಿಯಿರುವ ಕಾರಣ

# "Review Petition"

(as per provision of Rule 26 of the KCS(CCA) Rules 1957)

RP No.1,
Dated. 30-05-2023.

ಇವರಿಂದ

ಎಸ್. ಮೂರ್ತಿ,
ಕಾರ್ಯದರ್ಶಿ(ದಂಡನಾ ಆದೇಶ ರೀತ್ಯ ಅಧೀನ ಕಾರ್ಯದರ್ಶಿ)
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನ ಸೌಧ, ಬೆಂಗಳೂರು.

ಇವರಿಗೆ

1. ಮಾನ್ಯ ಸಭಾಧ್ಯಕ್ಷರು,
   ಕರ್ನಾಟಕ ವಿಧಾನಸಭೆ,
   ವಿಧಾನ ಸೌಧ,
   ಬೆಂಗಳೂರು-560 001.

2. ಮಾನ್ಯ ಸಭಾಪತಿಗಳು,
   ಕರ್ನಾಟಕ ವಿಧಾನ ಪರಿಷತ್ತು,
   ವಿಧಾನ ಸೌಧ,
   ಬೆಂಗಳೂರು-560 001.

3. ಮಾನ್ಯ ಮುಖ್ಯಮಂತ್ರಿಗಳು,
   ಕರ್ನಾಟಕ ಸರ್ಕಾರ,
   ವಿಧಾನ ಸೌಧ,
   ಬೆಂಗಳೂರು-560 001.

4. ಮಾನ್ಯ ಕಾನೂನು, ಸಂಸಧೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು,
   ಕರ್ನಾಟಕ ಸರ್ಕಾರ,
   ವಿಧಾನ ಸೌಧ,
   ಬೆಂಗಳೂರು-560 001.

ಗೌರವಾನ್ವಿತ ರಾಜ್ಯಪಾಲರು ಕಳುಹಿಸಿರುವ ಮೇಲ್ಮನವಿ ಸಚಿವಾಲಯದಲ್ಲಿ ಬಾಕಿಯಿರುವ ಕಾರಣ

# "Review Petition"

(as per provision of Rule 26 of the KCS(CCA) Rules 1957)

RP No.1,
Dated. 30-05-2023.

| | | |
|---|---|---|
| **ಎಸ್.ಮೂರ್ತಿ,**<br>ಕಾರ್ಯದರ್ಶಿ<br>(ದಂಡನಾ ಆದೇಶದ ರೀತ್ಯಾ ಅಧೀನ ಕಾರ್ಯದರ್ಶಿ)<br>ಕರ್ನಾಟಕ ವಿಧಾನಸಭೆ ಸಚಿವಾಲಯ,<br>ವಿಧಾನ ಸೌಧ, ಬೆಂಗಳೂರು. | Vs | **ಮಾನ್ಯ ವಿಶೇಷ ಮಂಡಳಿ**<br>ಕರ್ನಾಟಕ ವಿಧಾನಸಭೆ ಸಚಿವಾಲಯ<br>ವಿಧಾನ ಸೌಧ, ಬೆಂಗಳೂರು.<br>(Consisting of Hon'ble CM.,/ Speaker /Chairman / Minister for Law & Parliamentary Affairs) |

ಕರ್ನಾಟಕ ವಿಧಾನಸಭೆ ಸಚಿವಾಲಯದ(ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳು, 2003ರ ನಿಯಮ 8 ಮತ್ತು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 26ರಲ್ಲಿ ಮರು ಪರಿಶೀಲನಾ ಅರ್ಜಿಗಳನ್ನು ಸ್ವೀಕರಿಸಲು; ಮರು ಪರಿಶೀಲನೆ ಮಾಡಲು ಮತ್ತು ಪುನರ್ ಆದೇಶಗಳನ್ನು ಮಾಡಲು 'ಮಾನ್ಯ ವಿಶೇಷ ಮಂಡಳಿ'ಗೆ ಅವಕಾಶವಿದೆ. ಈ ಕಾನೂನುಗಳ ಅವಕಾಶಗಳಡಿ ಈ ಪುನರ್ ಪರಿಶೀಲನಾ ಅರ್ಜಿ.

**ವಿಷಯಃಸಂವಿಧಾನಬಾಹಿರವಾದ 'ದಂಡನಾ ಆದೇಶ'ವನ್ನು ವಾಪಸ್ಸು ಪಡೆದು/ರದ್ದುಪಡಿಸಿ, ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ ಹುದ್ದೆಗೆ ಪುನರ್‌ಸ್ಥಾಪಿಸಲು - ಪುನರ್ ಪರಿಶೀಲನಾ ಅರ್ಜಿ.**

ಉಲ್ಲೇಖಃ 1. ದಂಡನಾ ಆದೇಶ, ದಿನಾಂಕ: 21-4-2022(ಅಡಕ-1)

2. ಗೌರವಾನ್ವಿತ ರಾಜ್ಯಪಾಲರು ಸಚಿವಾಲಯಕ್ಕೆ ಕಳುಹಿಸಿರುವ ಮೇಲ್ಮನವಿ, ದಿ:11-1-2023 (ಅಡಕ-2)

\- - - - - - - -

1. ಕಾರ್ಯದರ್ಶಿ ಹುದ್ದೆಯಲ್ಲಿದ್ದ ನನ್ನ ವಿರುದ್ಧ ಮಾಡಿದ್ದ ಆರೋಪಗಳು - 2016 ಮತ್ತು 2017ರಲ್ಲಿ, ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಜರುಗಿದ ಕರ್ನಾಟಕ ವಿಧಾನಮಂಡಲದ ಚಳಿಗಾಲದ ಅಧಿವೇಶನದ ಏರ್ಪಾಡುಗಳ ಕಾಮಗಾರಿ/ಸರಕು ಸೇವೆಗಳ ಸಂಗ್ರಹಣೆ, ಪ್ರಕ್ರಿಯೆಗಳನ್ನು ನಿರ್ವಹಿಸಿ, ಅಧೀನದ ಅಧಿಕಾರಿ/ಸಿಬ್ಬಂದಿಗಳು ಸಲ್ಲಿಸಿದ್ದ ಕಡತಗಳ ಬಗ್ಗೆ - **ಅಂದಿನ ಸಭಾಧ್ಯಕ್ಷರಿಗೆ ಸರಿಯಾಗಿ ಸಲಹೆ ನೀಡಿಲ್ಲ; ಸಭಾಧ್ಯಕ್ಷರನ್ನು ತಪ್ಪುದಾರಿಗೆ ಎಳೆದು, ಕತ್ತಲೆಯಲ್ಲಿಟ್ಟು, ಅವರ ನಂಬಿಕೆಗೆ ದ್ರೋಹಬಗೆದು, ಅಂದಿನ ಸಭಾಧ್ಯಕ್ಷರಿಂದ ವೆಚ್ಚಗಳ ಕಡತಗಳಿಗೆ ಅನುಮೋದನೆ ಸಹಿ ಪಡೆದಿರುತ್ತಾರೆ. ಇದು "ಗಂಭೀರ ಕರ್ತವ್ಯಲೋಪ"**, (ದೋಷಾರೋಪಗಳ ಪಟ್ಟಿಯ ಅಂತಿಮ ಪುಟದಲ್ಲಿ

-2

ನಮೂದಿಸಲಾಗಿದೆ) ಈ ಆರೋಪಗಳನ್ನು ನನ್ನೊಬ್ಬನ ವಿರುದ್ಧ ಮಾಡಿ, ನನ್ನೋಬ್ಬನ ವಿರುದ್ದ ಇಲಾಖಾ ವಿಚಾರಣೆ ನಡೆಸಲಾಗಿದೆ.

2. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ ಸಚಿವಾಲಯ ಇವರಿಗೆ ಹಣಕಾಸಿನ ಅಧಿಕಾರಗಳು ಅಥವಾ ಆಡಳಿತಾತ್ಮಕ ಅಧಿಕಾರಗಳು ಇಲ್ಲ. ಎಲ್ಲವೂ ಮಾನ್ಯ ಸಭಾಧ್ಯಕ್ಷರಿಗೆ ಮಾತ್ರ ಇರುತ್ತದೆ. ಜೊತೆಗೆ ಉಲ್ಲೇಖಿತ ವೆಚ್ಚಗಳ ಕಾಮಗಾರಿ/ಸರಕು ಸಂಗ್ರಹರಣೆಗಳ ಕಾರ್ಯಾದೇಶಗಳನ್ನು ನಾನು ನೀಡಿಲ್ಲ. ಸರಬರಾಜುದಾರರ ಬಿಲ್‌ಗಳನ್ನು ನಾನು ದೃಢೀಕರಿಸಿಲ್ಲ. ಹಣ ಪಾವತಿಗೆ ನಾನು ಅನುಮೋದನೆ ನೀಡಿಲ್ಲ. ಸದರಿ ವೆಚ್ಚಗಳ ಹಣ ಬಿಡುಗಡೆಯ ಡ್ರಾಯಿಂಗ್ ಅಫೀಸರ್ ಕೂಡ ನಾನಲ್ಲ. ಸಚಿವಾಲಯದಲ್ಲಿ ಕೆಳಹಂತದಿಂದ ಬಂದ ಉಲ್ಲೇಖಿತ ವೆಚ್ಚಗಳ ಪ್ರತಿ ಕಡತಗಳನ್ನು CAG ಕಛೇರಿಯ IFA ಪರಿಶೀಲನೆ ಮತ್ತು ಶಿಫಾರಸ್ಸು ಪಡೆದು, ನಂತರ ಮಾನ್ಯ ಸಭಾಧ್ಯಕ್ಷರಿಗೆ ಕಳುಹಿಸಿರುತ್ತೇನೆ. ಆ ತರುವಾಯ, ಮಾನ್ಯ ಸಭಾಧ್ಯಕ್ಷರು ಪರಿಶೀಲಿಸಿ, ಒಪ್ಪಿಗೆ ನೀಡಿ, ಸಹಿ ಮಾಡಿ ಕಳುಹಿಸಿದ ಕಡತಗಳನ್ನು ಕೆಳಹಂತದ ಅಧಿಕಾರಿಗಳಿಗೆ ಮುಂದಿನ ಕ್ರಮಗಳಿಗೆ ರವಾನಿಸಿರುತ್ತೇನೆ. ಕಡತಗಳನ್ನು ಅನುಮೋದಿಸಿದ ಹಿಂದಿನ ಮಾನ್ಯ ಸಭಾಧ್ಯಕ್ಷರಿಂದ ಯಾವುದೇ ದೂರುಗಳು ಇಲ್ಲ. ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿಲ್ಲ. ಬದಲಿಗೆ ಅನುದಾನಗಳು ಉಳಿತಾಯವಾಗಿವೆ. ವಿವರಗಳು ಕೆಳಕಂಡಂತಿವೆ :

| ಆರ್ಥಿಕ ವರ್ಷ | ಒದಗಿಸಿದ ಅನುದಾನ | ಭರಿಸಲಾದ ವೆಚ್ಚ | ಉಳಿತಾಯ |
|---|---|---|---|
| 2016 | 20,55,00,000/- | 18,75,78,117/- | 1,79,21,883/- |
| 2017 | 29,39,20,000/- | 24,94,97,417/- | 4,44,22,583/- |

ಈ ವೆಚ್ಚಗಳನ್ನು ಭಾರತದ ಲೆಕ್ಕ ಪರಿಶೋಧಕರು(CAG) ಆಡಿಟ್ ಮಾಡಿದ್ದಾರೆ; ಯಾವುದೇ ಹಣ ದುರಪಯೋಗ ಅಥವಾ ದುಂದು ವೆಚ್ಚದ ಆರೋಪಗಳ ಬಗ್ಗೆ ವರದಿ ಮಾಡಿಲ್ಲ. ವಾಸ್ತವ ಹೀಗಿದ್ದರೂ,

3. ತರುವಾಯ ಅಸ್ಥಿತ್ವಕ್ಕೆ ಬಂದ 15ನೇ ಕರ್ನಾಟಕ ವಿಧಾನಸಭೆ ಅವಧಿಯಲ್ಲಿ, ಮೇಲಿನ ಶಾಸಕಾಂಗದ ವೆಚ್ಚಗಳ ಬಗ್ಗೆ CAG ಆಡಿಟ್ ಮಾಡಿದ್ದರೂ, ಕಾನೂನುಗಳಿಗೆ ವಿರುದ್ಧವಾಗಿ, ಕರ್ನಾಟಕ ಸರ್ಕಾರದ ಅಧೀನದ ಲೆಕ್ಕಪರಿಶೋಧನಾ ಇಲಾಖೆಯ(SAD) ಕೆಲ ಅಧಿಕಾರಿಗಳಿಂದ ಪುನರ್ ಲೆಕ್ಕಪರಿಶೋಧನೆ ಮಾಡಿಸಿ, ಅನಧಿಕೃತ ವರದಿಯೊಂದನ್ನು ಪಡೆದರು. SAD ವರದಿಯಲ್ಲಿನ ಪ್ರಮುಖ ಆರೋಪಗಳು :

i. PWD ಮಾನದಂಡಗಳ ಪ್ರಕಾರ ಸರಕು ಸೇವೆಗಳ ಸಂಗ್ರಹಣೆ ಪ್ರಕ್ರಿಯೆಗಳನ್ನು ಮಾಡಿಲ್ಲ; KTPP ಕಾಯ್ದೆಯ 4(G) ವಿನಾಯಿತಿ ಪಡೆದು, ಆ ಮೂಲಕ ಮಾಡಲಾಗಿದೆ;

ii. ಸರಕು ಸೇವೆಗಳ ಸಂಗ್ರಹಣೆಯ ಕಾರ್ಯಾದೇಶಗಳನ್ನು ಸರಬರಾಜು/ಗುತ್ತೀಗೆದಾರರಿಗೆ ನೀಡಿದವರು ಮತ್ತು ಬಿಲ್ ದೃಢೀಕರಿಸಿರುವವರು ಅಧೀನ ಕಾರ್ಯದರ್ಶಿ ದರ್ಜೆ ಅಧಿಕಾರಿಗಳು. ಇವರುಗಳಿಗೆ ತಾಂತ್ರೀಕ ಅರ್ಹತೆಗಳು ಇಲ್ಲ;

iii. ಸರಬರಾಜು/ಗುತ್ತೀಗೆದಾರರಿಂದ GST ಪಾವತಿಗಳನ್ನು ಖಾತ್ರಿಪಡಿಸಿಕೊಂಡಿಲ್ಲ;

iv. Bisleri ಕುಡಿಯುವ ನೀರಿನ ಬದಲು, ಸುವರ್ಣಸೌಧದ ಕೊಠಡಿಗಳಲ್ಲಿನ ಕೊಳಾವಿ ನೀರನ್ನು ಬಳಸಿ, ವೆಚ್ಚ ಉಳಿಕೆ ಮಾಡಬೇಕಿತ್ತು.

v. ಮಂಜೂರಾದ ಅನುದಾನಗಳನ್ನು ಉಳಿತಾಯ ಮಾಡಿ, ಪೂರ್ಣ ಬಳಕೆ ಮಾಡಲು ವಿಫಲ. . . . ಇತ್ಯಾದಿ.

ಈ SAD ವರದಿ ಆಧಾರಿಸಿ ನನ್ನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಿದ್ಧಪಡಿಸಿ, ಸರ್ಕಾರಿ ಅಧಿಕಾರಿಯೊಬ್ಬರಿಂದ ಇಲಾಖಾ ವಿಚಾರಣೆ ಮಾಡಿಸಿದರು.

4. (i)ಕಾರ್ಯಾದೇಶಗಳನ್ನು ನೀಡಿ, ಬಿಲ್ ದೃಢೀಕರಿಸಿದ ಅಧಿಕಾರಿಗಳು, ಸರಬರಾಜು/ ಗುತ್ತಿಗೆದಾರರು, ಸಚಿವಾಲಯದ ಡ್ರಾಯಿಂಗ್ ಅಫೀಸರ್ ಈ ವಿಚಾರಣೆಯಲ್ಲಿ ಸಾಕ್ಷಿಗಳಾಗಿ ಹಾಜರಾಗಿ, ನೀಡಿದ ಕಾರ್ಯಾದೇಶಗಳಂತೆ ಸರಕು ಸೇವೆಗಳನ್ನು ಒದಗಿಸಲಾಗಿದೆ. ನೀಡಿದ ಬಿಲ್‌ಗಳಿಗೆ GST ಪಾವತಿ(ಪ್ರತಿಗಳನ್ನು ಒದಗಿಸಲಾಗಿದೆ)ಸಲಾಗಿದೆ. ಹಿಂದಿನ ವಾಡಿಕೆಗಳಂತೆ, ತುರ್ತು ಕಾರಣಕ್ಕಾಗಿ KTPP ಕಾಯ್ದೆಯ 4(G) ವಿನಾಯಿತಿ ಪಡೆಯಲಾಗಿದೆ. ವಿಧಾನಮಂಡಲದ ಅಧಿವೇಶನಗಳು ಯಶಸ್ವಿಗೊಂಡಿವೆ; ಸರ್ಕಾರಕ್ಕೆ ನಷ್ಟವಾಗಿಲ್ಲ; ಯಾವುದೇ ದೂರುಗಳು ಇಲ್ಲವೆಂದು ಸಾಕ್ಷ್ಯ ನೀಡಿದ್ದಾರೆ.

(ii)ನನ್ನ ವಿರುದ್ಧ ಪ್ರಮುಖವಾಗಿ, ಮಾಡಲಾಗಿರುವ ಸಭಾಧ್ಯಕ್ಷರಿಗೆ ತಪ್ಪು ದಾರಿಗೆ ಎಳೆದಿರುತ್ತೇನೆ, ಕತ್ತಲೆಯಲ್ಲಿ ಸಹಿ ಪಡೆದಿರುತ್ತೇನೆ ಇಂತಹ ಆರೋಪಗಳಿಗೆ ಹಿಂದಿನ ಸಭಾಧ್ಯಕ್ಷರಾಗಲಿ, ಯಾರೂ ಬಂದು ಸಾಕ್ಷಿ ನುಡಿದಿಲ್ಲ.

5. ವಿಚಾರಣೆಯಲ್ಲಿ ಮೇಲಿನಂತೆ ಸಾಕ್ಷ್ಯಾಧಾರಗಳು ದಾಖಲಾಗಿದ್ದರೂ, ಎಲ್ಲ ಆರೋಪಗಳು ಸಾಬಿತಾಗಿವೆ ಎಂದು ಪೂರ್ವಗ್ರಹಪೀಡಿತ ವರದಿಯನ್ನು ವಿಚಾರಣಾಧಿಕಾರಿ(ಸರ್ಕಾರಿ ಅಧಿಕಾರಿ) ನೀಡಿದರು/ಪಡೆದರು; ವಿಚಾರಣಾ ವರದಿಯಲ್ಲಿನ ವಿಚಾರಣಾಧಿಕಾರಿಯವರ ಶೋಧನೆಗಳು ಯಾವುದೇ ಸಾಕ್ಷ್ಯಾಧಾರಗಳನ್ನು, ಪುರಾವೆಗಳನ್ನು ಆದಾರಿಸಿಲ್ಲ. ಕಾನೂನು, ಸತ್ಯ ಮತ್ತು ದಾಖಲೆಗಳನ್ನು ಅವಲಂಬಿಸಿಲ್ಲ. ವಿಚಾರಣೆಯಲ್ಲಿ ನನ್ನ ವಿರುದ್ಧ ಆರೋಪ ಸಾಬಿತುಪಡಿಸುವ ಯಾವೊಂದು ಸಾಕ್ಷ್ಯಾಧಾರಗಳಿಲ್ಲ. ವಾಸ್ತವ ಹೀಗಿದ್ದಾಗ್ಯೂ, ವಿಚಾರಣಾ ವರದಿಯಲ್ಲಿ ಎಲ್ಲ ಆರೋಪಗಳು ಸಾಬಿತಾಗಿರುತ್ತವೆಂದು ವರದಿ ನೀಡಲಾಗಿದೆ. ವಿಚಾರಣಾ ವರದಿ CCA ನಿಯಮಗಳಿಗೆ ಅನುಗುಣವಾಗಿಲ್ಲ. ವಿಚಾರಣಾ ವರದಿ ಪೂರ್ವಗ್ರಹದಿಂದ ಸಿದ್ದಪಡಿಸಲಾಗಿದೆ.

**6.** (i)ವಿಚಾರಣಾ ವರದಿ ಬಗ್ಗೆ ನನಗೆ ನೀಡಿದ 2ನೇ ಷೋಕಾಸ್ ನೋಟೀಸ್‌ಗೆ ದಿನಾಂಕ: 22-2-2022ರಂದು ವಿವರವಾದ ಉತ್ತರವನ್ನು ನೀಡಿರುತ್ತೇನೆ. ಜೊತೆಗೆ, ಭಾರತ ಸಂವಿಧಾನದ ಅನುಚ್ಛೇದ 311ರ ಪರಂತುಕದಲ್ಲಿ, ವಿಚಾರಣೆ ಒಳಗೆ ಒದಗಿದ "ಸಾಕ್ಷ್ಯಾಧಾರಗಳಿಂದ" ಮಾತ್ರ ಆರೋಪಿಗಳಿಗೆ ದಂಡನೆ ವಿದಿಸಲು ಅವಕಾಶವಿದೆ. ವಿಚಾರಣಾಧಿಕಾರಿಯವರ "ವಿಚಾರಣಾ ವರದಿ" ಆಧಾರದ ಮೇಲೆ ದಂಡನೆ ವಿದಿಸಲು ಅವಕಾಶವಿಲ್ಲವೆಂದು ತಿಳಿಸಿರುತ್ತೇನೆ.

(ii)ಸಾಕ್ಷ್ಯಾಧಾರಗಳಿಲ್ಲದಿದ್ದರೂ, ನನ್ನ ಸುದೀರ್ಘವಾದ ದಿನಾಂಕ: 22-2-2022ರಂದು ನೀಡಿದ್ದ ಉತ್ತರವನ್ನು ಪರಿಗಣಿಸದೆ, ಭಾರತ ಸಂವಿಧಾನದ ಈ ಅನುಚ್ಛೇದಕ್ಕೆ ವಿರುದ್ಧವಾಗಿ, ಕಳೆದ ಅವಧಿಯಲ್ಲಿದ್ದ ಸಚಿವಾಲಯದ ವಿಶೇಷ ಮಂಡಳಿ, ಕೇವಲ "ಕರ್ತವ್ಯಲೋಪದ ಆರೋಪ"ಗಳಿಗೆ ನನಗೆ ಕಾರ್ಯದರ್ಶಿ ಹುದ್ದೆಯಿಂದ 3 ದರ್ಜೆ ಕೆಳಗಿನ ಅಧೀನ ಕಾರ್ಯದರ್ಶಿ ಹುದ್ದೆಗೆ ಹಿಂಬಡ್ತಿ ಜೊತೆಗೆ ಇನ್ನೂ ಕೆಲವು **"ದಂಡನೆ"**ಗಳನ್ನೂ ದಿನಾಂಕ:21-4-2022ರಂದು ವಿಧಿಸಿದೆ(ಅಡಕ-1):

7. CCA ನಿಯಮ, ಕಾನೂನು ಮತ್ತು ಸಂವಿಧಾನಬಾಹಿರವಾದ ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳಿಗೆ ವಿರುದ್ಧವಾದ ಉಲ್ಲೇಖಿತ **"ದಂಡನೆ"**ಆದೇಶವನ್ನು ರದ್ದುಪಡಿಸಬೇಕೆಂದು ವಿನಂತಿಸಿ ನಾನು 'ಮೇಲ್ಮನವಿ ಪ್ರಾಧಿಕಾರ'ವಾಗಿರುವ ಗೌರವಾನ್ವಿತ ರಾಜ್ಯಪಾಲರಿಗೆ ಕಾನೂನು ಅವಕಾಶಗಳಂತೆ ದಿನಾಂಕ:11-05-2022ರಂದು ಮೇಲ್ಮನವಿ ಸಲ್ಲಿಸಿದ್ದೆ. ಆದರೆ ಗೌರವಾನ್ವಿತರು ಸದರಿ ಮೇಲ್ಮನವಿಯನ್ನು 'ಮುಂದಿನ ಕ್ರಮಕ್ಕಾಗಿ' ಎಂದು ನಮೂದಿಸಿ, ದಿನಾಂಕ:11-1-2023ರಂದು ಸಚಿವಾಲಯಕ್ಕೆ ಕಳುಹಿಸಿರುತ್ತಾರೆ(ಅಡಕ-2). ಆದರೆ ಇದುವರಿವಿಗೂ ಸದರಿ ಮೇಲ್ಮನವಿ ಬಗ್ಗೆ ಸಚಿವಾಲಯದ ವಿಶೇಷ ಮಂಡಳಿಯಿಂದ ಯಾವುದೇ ಕ್ರಮಕೈಕೊಂಡಿರುವುದಿಲ್ಲ. ಬಾಕಿ ಉಳಿದಿರುವ ಮೇಲ್ಮನವಿ ಇತ್ಯರ್ಥಗೊಳ್ಳಬೇಕಿದೆ. ಈ ಎಲ್ಲ ಕಾರಣಗಳಿಗಾಗಿ ಮಾನ್ಯ ವಿಶೇಷ ಮಂಡಳಿ ಮುಂದೆ ಈ ಪರಿಶೀಲನಾ ಅರ್ಜಿ.

## Grounds for Review Petition

1. **"ದಂಡನೆ"**ಆದೇಶದಲ್ಲಿ(ಅಡಕ-1): - "..ಆರೋಪಿತ ಅಧಿಕಾರಿಯವರು ವಿಚಾರಣಾ ವರದಿಗೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಆದರೆ, ಆರೋಪಗಳ ನಿರಾಕರಣೆಗೆ ಪೂರಕವಾದ ಯಾವುದೇ ಅಗತ್ಯ ದಾಖಲೆಗಳನ್ನು ಒದಗಿಸಿರುವುದಿಲ್ಲ ಹಾಗೂ ದೋಷಾರೋಪಣೆಗೆ ಸಂಬಂಧಿಸಿದಂತೆ ಹೊಸದಾಗಿ ಯಾವುದೇ ಕಾನೂನಾತ್ಮಕ ಅಂಶಗಳನ್ನು ಪ್ರಸ್ತಾಪಿಸಿರುವುದಿಲ್ಲ" ಎಂದು ತಿಳಿಸಲಾಗಿದೆ.
   - ಇಲಾಖಾ ವಿಚಾರಣಾ ವರದಿಗೆ 2ನೇ ಷೋಕಾಸ್ ನೋಟೀಸ್‌ನಲ್ಲಿ ವಿವರವಾದ ಆಕ್ಷೇಪಗಳನ್ನು/ಉತ್ತರಗಳನ್ನು ನೀಡಿದ್ದರೂ, ನನ್ನ ಪ್ರತಿಯೊಂದು ಆಕ್ಷೇಪಣೆಯ ಅಂಶಗಳ ಬಗ್ಗೆ ದಂಡನಾದೇಶದಲ್ಲಿ ಪ್ರಸ್ತಾಪಿಸಿಲ್ಲ/ಉಲ್ಲೇಖಿಸಿಲ್ಲ. ಒಂದು ವೇಳೆ ನನ್ನ ಉತ್ತರಗಳನ್ನು ಒಪ್ಪದಿದ್ದಲ್ಲಿ ದಂಡನಾ ಆದೇಶದಲ್ಲಿ ಆ ಬಗ್ಗೆ ಕೂಡ ಯಾವುದೇ ನಮೂದು ಇಲ್ಲ. ಇಂತಹ ದಂಡನಾ ಆದೇಶಗಳು ಸಂವಿಧಾನ ಮತ್ತು ಕಾನಾನುಬಾಹಿರವೆಂದು S.G.Nayak & another Vs Canara Bank & another ILR 2005 Kar.3440(3496) ತೀರ್ಪಿನಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡಿದೆ. ಮುಂದುವರೆದು, ಈ ತೀರ್ಪಿನಲ್ಲಿ "....the

Order of the punishment should contain reasons. Right to reasons is an indispensable part of a sound judicial system..." ಎಂದು ತಿಳಿಸಿದೆ.

- ಹೀಗಿದ್ದಾಗ್ಯೂ, ದಂಡನಾ ಆದೇಶದಲ್ಲಿ ಆರೋಪಗಳ ನಿರಾಕರಣೆಗೆ ಪೂರಕ ದಾಖಲೆಗಳನ್ನು ಮತ್ತು ಕಾನೂನಾತ್ಮಕ ಅಂಶಗಳನ್ನು ನೀಡಿಲ್ಲವೆನ್ನುವುದು, ಕಾನೂನುಗಳಿಗೆ ಮತ್ತು ಸ್ವಾಭಾವಿಕ ನ್ಯಾಯಕ್ಕೆ ಮಾಡಿದ ದ್ರೋಹ ಮತ್ತು ಅನ್ಯಾಯ. ಏಕಪಕ್ಷಿಯ ತೀರ್ಮಾನ. ದಂಡನಾ ಆದೇಶವು CCA ನಿಯಮ ಮತ್ತು ಭಾರತ ಸಂವಿಧಾನಬಾಹಿರವಾದದ್ದು ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ವಿರುದ್ಧವಾದದು.

ಈ ಕಾರಣಗಳಿಂದ ನಾನು 2ನೇ ಷೋಕಾಸ್ ನೋಟೀಸ್‌ಗೆ ನೀಡಿದ ವಿವರವಾದ ಉತ್ತರ/ಆಕ್ಷೇಪಣೆಗಳು ಪುನರ್ ಪರಿಶೀಲನೆಯಾಗಬೇಕಿದೆ. ಈ ಕಾರಣಕ್ಕಾಗಿ ಪುನರ್ ಪರಿಶೀಲನಾ ಅರ್ಜಿ.

2. (i)ವಿಚಾರಣಾಧಿಕಾರಿಯವರು ನಿಯಮಬಾಹಿರವಾಗಿ ವಿಚಾರಣೆ ನಡೆಸುತ್ತಿರುವ ಬಗ್ಗೆ ಲಿಖಿತ ಆಕ್ಷೇಪಣೆಗಳನ್ನು ದಾಖಲಿಸಿ, ಸರ್ಕಾರಿ ಅಧಿಕಾರಿ ಬದಲಿಗೆ, ನಿವೃತ ನ್ಯಾಯಾದೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲು ವಿಶೇಷ ಮಂಡಳಿಗೆ ವಿನಂತಿಸಿರುತ್ತೇನೆಂದು ವಿಚಾರಣಾಧಿಕಾರಿಗೆ ಪ್ರಾರಂಬಿಕ ಹಂತದಲ್ಲಿಯೇ ಲಿಖಿತ ಮನವಿ ನೀಡಿದ್ದೇನೆ. ಆದಾಗ್ಯೂ, ನನ್ನ ಆಕ್ಷೇಪಣೆಗಳನ್ನು ಮನವಿಯನ್ನು ವಿಚಾರಣಾಧಿಕಾರಿಯವರೇ ತಿರಸ್ಕರಿಸಿ, ವಿಚಾರಣೆಯನ್ನು ಕಾನೂನುಬಾಹಿರವಾಗಿ ಮುಂದುವರೆಸಿ, ಮುಗಿಸಿದರು. ಯಾರ ವಿರುದ್ಧ ಆಕ್ಷೇಪಣೆ ಮಾಡಲಾಗಿದೆಯೋ ಅದೇ ವಿಚಾರಣಾಧಿಕಾರಿ ಅಂತಹ ಅರ್ಜಿಗಳನ್ನು ಇತ್ಯರ್ಥಗೊಳಿಸುವಂತಿಲ್ಲ. ಇದು ಕಾನೂನು ಮತ್ತು ನೈಸರ್ಗಿಕ ನ್ಯಾಯಕ್ಕೆ ವ್ಯತಿರಿಕ್ತವಾಗಿದೆ;
(ii)ಇಲಾಖಾ ವಿಚಾರಣೆಯ ಪ್ರಾರಂಭಿಕ ಹಂತದಲ್ಲಿಯೇ, ವಿಚಾರಣಾಧಿಕಾರಿಯವರು ಪಕ್ಷಪಾತಿಯಾಗಿ ವಿಚಾರಣೆ ನಡೆಸುತ್ತಿರುವ ಬಗ್ಗೆ ತಿಳಿಸಿ, ಸರ್ಕಾರಿ ಅಧಿಕಾರಿ ಬದಲಿಗೆ ಸರ್ಕಾರದ ನೀತಿಯಂತೆ ನಿವೃತ ನ್ಯಾಯದೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡುವಂತೆ ನಾನು ಹಿಂದಿನ ಸಭಾಧ್ಯಕ್ಷರು/ವಿಶೇಷ ಮಂಡಳಿಯನ್ನು ವಿನಂತಿಸಿದ್ದೆ. ಈ ಅರ್ಜಿ ಇತ್ಯರ್ಥಗೊಳ್ಳಲಿಲ್ಲ ಹಾಗೂ ಆ ಬಗ್ಗೆ ಯಾವ ಮಾಹಿತಿ ಕೂಡ ನೀಡಲಿಲ್ಲ. ಕಾನೂನು ಪ್ರಕಾರವಾದ ಅರ್ಜಿಗಳ ನಿರ್ಲಕ್ಷ್ಯದ ಬಗ್ಗೆ /ದುರದ್ದೇಶಗಳ ಬಗ್ಗೆ ಪುನರ್ ಪರಿಶೀಲನೆಯಾಗಬೇಕಿದೆ. ಈ ಕಾರಣಕ್ಕಾಗಿ ಪುನರ್ ಪರಿಶೀಲನಾ ಅರ್ಜಿ.

3. ಇನ್ನು ದಂಡನಾ ಆದೇಶವನ್ನು ರದ್ದುಪಡಿಸಬೇಕೆಂದು ಮಾನ್ಯ ರಾಜ್ಯಪಾಲರಿಗೆ ನಾನು ಸಲ್ಲಿಸಿರುವ ಮೇಲ್ಮನವಿಯನ್ನು ಮಾನ್ಯ ರಾಜ್ಯಪಾಲರು ಸಚಿವಾಲಯಕ್ಕೆ ಮುಂದಿನ ಕ್ರಮಗಳಿಗಾಗಿ (ಅಡಕ-2) ಕಳುಹಿಸಿರುತ್ತಾರೆ. ಈ ಮೇಲ್ಮನವಿಯನ್ನು ಮಾನ್ಯ ವಿಶೇಷ ಮಂಡಳಿ ಈವರೆಗೆ ಪರಿಶೀಲಿಸಿ, ಇತ್ಯರ್ಥಪಡಿಸಿಲ್ಲ. ಬಾಕಿ ಉಳಿಸಿಕೊಂಡಿದೆ. ಈ ಕಾರಣಕ್ಕಾಗಿ ಪುನರ್ ಪರಿಶೀಲನಾ ಅರ್ಜಿ.

4. ಕರ್ನಾಟಕ ವಿಧಾನಸಭೆ ಸಚಿವಾಲಯದ(ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳು, 2003ರ ನಿಯಮ 8 ಮತ್ತು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು

ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 26ರಲ್ಲಿ ಮರು ಪರಿಶೀಲನಾ ಅರ್ಜಿಗಳನ್ನು ಸ್ವೀಕರಿಸಲು; ಮರು ಪರಿಶೀಲನೆ ಮತ್ತು ಪುನರ್ ಆದೇಶಗಳನ್ನು ಮಾಡಲು "ಮಾನ್ಯ ವಿಶೇಷ ಮಂಡಳಿ" ಗೆ ಅವಕಾಶವಿದೆ. ಈ ಕಾರಣಕ್ಕಾಗಿ ಈ ಪುನರ್ ಪರಿಶೀಲನಾ ಅರ್ಜಿ.

## ಮ ನ ವಿ

ಕರ್ನಾಟಕ ವಿಧಾನಸಭೆ ಸಚಿವಾಲಯದ(ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳು, 2003ರ ನಿಯಮ 8 ಮತ್ತು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 26ರಲ್ಲಿ ಮರು ಪರಿಶೀಲನಾ ಅರ್ಜಿಗಳನ್ನು ಸ್ವೀಕರಿಸಲು; ಮರು ಪರಿಶೀಲನೆ ಮತ್ತು ಪುನರ್ ಆದೇಶಗಳನ್ನು ಮಾಡಲು "ಮಾನ್ಯ ವಿಶೇಷ ಮಂಡಳಿ"ಗೆ ಅವಕಾಶವಿದೆ. ಈ ಕಾನೂನಿನ ಅವಕಾಶಗಳಡಿ -

I. ದಲಿತ ಅಧಿಕಾರಿಯಾದ ನನ್ನಿಂದ ಕಾರ್ಯದರ್ಶಿ ಹುದ್ದೆಯನ್ನು ಕಿತ್ತುಕೊಂಡು ಮೇಲ್ವರ್ಗದವರಿಗೆ ನೀಡಬೇಕೆಂಬ ಪೂರ್ವನಿಶ್ಚಿತ ಯೋಜನೆ/ಷಡ್ಯಂತ್ರದ ಪ್ರಕರಣವಿದು. ಉಲ್ಲೇಖಿತ ವೆಚ್ಚಗಳನ್ನು CAG ಲೆಕ್ಕಪರಿಶೋಧನೆಗಳನ್ನು ಮಾಡಿದ್ದರೂ, ಸಂವಿಧಾನಬಾಹಿರವಾಗಿ SAD ಇಲಾಖೆಯ ಕೆಲ ಅಧಿಕಾರಿಗಳಿಂದ ಮತ್ತೊಮ್ಮೆ ಮಾಡಿಸಿ, ಅವರ ಅನಧಿಕೃತ ವರದಿ ಆಧಾರಿಸಿ ದೋಷಾರೋಪ ಪಟ್ಟಿಯನ್ನು ನನ್ನೊಬ್ಬನ ವಿರುದ್ಧ ಮಾತ್ರ ಸಿದ್ಧಪಡಿಸಲಾಗಿದೆ; ನನ್ನೊಬ್ಬನ ವಿರುದ್ಧ ಮಾತ್ರ ಇಲಾಖಾ ವಿಚಾರಣೆ ಮಾಡಲಾಗಿದೆ; ಸರ್ಕಾರದ ನೀತಿಯಂತೆ, ನಿವೃತ ನ್ಯಾಯದೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಬೇಕೆಂದು ಕೋರಿದ್ದರೂ, ಸರ್ಕಾರಿ ಅಧಿಕಾರಿಯನ್ನೇ ವಿಚಾರಣಾಧಿಕಾರಿಯನ್ನಾಗಿ ಮುಂದುವರೆಸಿ, ಅವರಿಂದ ಪೂರ್ವಗ್ರಹಪೀಡಿತ ವಿಚಾರಣಾ ವರದಿಯನ್ನು ಪಡೆಯಲಾಗಿದೆ. ಪೂರ್ವ ನಿಶ್ಚಿತದಂತೆ/ಷಡ್ಯಂತ್ರದಂತೆ ನನಗೆ 3 ಹುದ್ದೆಗಳಿಗೆ ಹಿಂಬಡ್ತಿ ದಂಡನೆ ವಿಧಿಸಿ, ಗೌರವಾನ್ವಿತ ರಾಜ್ಯಪಾಲರ ಮುಂದೆ ನನ್ನ ಮೇಲ್ಮನವಿ ಬಾಕಿಯಿದ್ದಾಗಲೂ ಶ್ರೀಮತಿ ವಿಶಾಲಾಕ್ಷಿ ಇವರಿಗೆ ಕಾರ್ಯದರ್ಶಿ ಹುದ್ದೆಗೆ ಅತುರಾತುರವಾಗಿ ಮುಂಬಡ್ತಿ ನೀಡಿರುತ್ತಾರೆ. ಮನುವಾದಿಗಳಿಂದ ಪೂರ್ವನಿಯೋಜಿತವಾಗಿದ್ದ ಈ ಪ್ರಕರಣವನ್ನು ಭಾರತ ಸಂವಿಧಾನದ ಆಶಯಗಳು ಮತ್ತು ಸಾಮಾಜಿಕ ನ್ಯಾಯದ ಹಿನ್ನಲೆಯಲ್ಲಿ ಪುನರ್ ಪರಿಶೀಲಿಸಬೇಕೆಂದು ವಿನಂತಿಸುತ್ತೇನೆ.

II. SADಯವರ ಅನಧಿಕೃತ ವರದಿ ಆದಾರಿಸಿ ನನ್ನ ವಿರುದ್ಧ ಸಿದ್ಧಪಡಿಸಿರುವ ದೋಷಾರೋಪ ಪಟ್ಟಿ ಕಾನೂನುಬಾಹಿರವಾದದ್ದು. ಕಡತಗಳಿಗೆ ಅನುಮೋದನೆ ನೀಡಿರುವ ಸಭಾಧ್ಯಕ್ಷರಿಂದ ಯಾವುದೇ ದೂರುಗಳು ಇಲ್ಲ. ಇಲಾಖಾ ವಿಚಾರಣೆ ಒಳಗೆ ಎಲ್ಲ ಸಾಕ್ಷಿದಾರರು ದೋಷಾರೋಪಗಳನ್ನು ಅಲ್ಲಗೆಳೆದಿರುತ್ತಾರೆ. ವಿಚಾರಣಾಧಿಕಾರಿ, ವರದಿಯಲ್ಲಿ ಮಾಡಿರುವ ಶೋಧನೆಗಳು (Findings) ಮತ್ತು ಶಿಫಾರಸ್ಸುಗಳು ದೋಷಾರೋಪ ಪಟ್ಟಿಯ ವ್ಯಾಪ್ತಿ ಮೀರಿದ್ದಾಗಿವೆ. ಅವರ ವರದಿ, CCA ಕಾನೂನು ಮತ್ತು ಭಾರತ ಸಂವಿಧಾನ ಮತ್ತು

-7

ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳಿಗೆ ವಿರುದ್ಧವಾಗಿದೆ ಮತ್ತು ಪೂರ್ವಗ್ರಹಪೀಡಿತವಾಗಿದೆ. ನಾನು ದಿನಾಂಕ:22-2-2022ರಂದು ಸಚಿವಾಲಯದ 2ನೇ ಷೋಕಾಸ್ ನೋಟೀಸ್‌ಗೆ ನೀಡಿರುವ ವಿವರವಾದ ಉತ್ತರವನ್ನು ಪರಿಗಣಿಸಿ, ನನ್ನನ್ನು ದೋಷಾರೋಪಗಳಿಂದ ಮುಕ್ತಗೊಳಿಸಬೇಕೆಂದು ವಿನಂತಿಸುತ್ತೇನೆ;

III. ಭಾರತ ಸಂವಿಧಾನ ಅನುಚ್ಛೇದ 311ರ ಪರುಂತುಕದಲ್ಲಿ ತಿಳಿಸಿರುವಂತೆ, ವಿಚಾರಣೆ ಒಳಗೆ ಒದಗಿದ 'ಸಾಕ್ಷ್ಯಾಧಾರಗಳಿಂದ' ಮಾತ್ರ ದಂಡನೆ ವಿಧಿಸಲು ಅವಕಾಶವಿದೆ. 'ವಿಚಾರಣಾ ವರದಿ' ಆಧಾರದ ಮೇಲೆ ದಂಡನೆ ವಿಧಿಸಲು ಅವಕಾಶವಿಲ್ಲ. ಆದಾಗ್ಯೂ, ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ, 'ಸಾಕ್ಷ್ಯಾಧಾರಗಳ'ಬದಲಿಗೆ ವಿಚಾರಣಾಧಿಕಾರಿಯವರ ಪೂರ್ವಗ್ರಹಪೀಡಿತವಾದ 'ವಿಚಾರಣಾ ವರದಿ' ಆಧಾರಿಸಿ ನೀಡಿರುವ, ಉಲ್ಲೇಖಿತ-1 ದಂಡನಾ ಆದೇಶವನ್ನು ರದ್ದುಪಡಿಸಿ, ನನ್ನನ್ನು ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ ಹುದ್ದೆಗೆ ಪುನರ್ ಸ್ಥಾಪಿಸಿ, ನನಗೆ ನ್ಯಾಯ ನೀಡಬೇಕೆಂದು ವಿನಂತಿಸುತ್ತೇನೆ;

IV. ಗೌರವಾನ್ವಿತ ರಾಜ್ಯಪಾಲರ ಮುಂದೆ ನನ್ನ ದಂಡನಾ ಆದೇಶದ ಬಗೆಗಿನ ಮೇಲ್ಮನವಿ ಬಾಕಿಯಿರುವಾಗ, ಅತುರಾತುರವಾಗಿ ನನಗಿಂತ ಸೇವೆಯಲ್ಲಿ ಕಿರಿಯರಾದ ಶ್ರೀಮತಿ ಎಂ.ಕೆ. ವಿಶಾಲಾಕ್ಷಿ ಇವರಿಗೆ ಕಾರ್ಯದರ್ಶಿ ಹುದ್ದೆಗೆ ಮುಂಬಡ್ತಿ ನೀಡಿ ಖಾಯಂ ಮಾಡಿರುವುದು ಕಾನೂನುಬಾಹಿರ. ಈ ಮುಂಬಡ್ತಿಯನ್ನು ರದ್ದುಪಡಿಸಬೇಕೆಂದು ವಿನಂತಿಸುತ್ತೇನೆ.

V. ಭಾರತ ಸಂವಿಧಾನ ಅನುಚ್ಛೇದ 14 ಮತ್ತು 16ರಲ್ಲಿ ನೀಡಿರುವ ಮೂಲಭೂತ ಹಕ್ಕುಗಳು ಮುಂದುವರೆದು, ಭಾರತ ಸಂವಿಧಾನ ಅನುಚ್ಛೇದ 212 ಮತ್ತು 311 ನನ್ನ ವಿಷಯದಲ್ಲಿ ಉಲ್ಲಂಘನೆಯಾಗಿವೆ. ಸಂವಿಧಾನ ರಕ್ಷಣೆ ಆಗಬೇಕೆಂದು ಕೂಡ ವಿನಂತಿಸುತ್ತೇನೆ.

( ಎಸ್. ಮೂರ್ತಿ)

ಕಿರುಕುಳ/ಅಪಪ್ರಚಾರ

## ಲೋಕಾಯುಕ್ತ/ಕ್ರಿಮಿನಲ್ ಕೇಸ್‌ಗಳಿಂದ ದೋಷಾಮುಕ್ತ

1. ಮಾಜಿ ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ ಸಚಿವಾಲಯ ಇವರು 2008ರಲ್ಲಿ ಕ್ರಿಮಿನಲ್ ಕೇಸ್ ದಾಖಲಿಸಿ, CODವತಿಯಿಂದ ತನಿಖೆಗೆ ಒಳಪಡಿಸಿದ ಪ್ರಕರಣ CC No.22279/2008ರಲ್ಲಿ, I Addl. CMM, Bangalore ನ್ಯಾಯಾಲಯ ತೀರ್ಪು ಪ್ರಕಟಿಸಿ ನನ್ನನ್ನು ದೋಷಾಮುಕ್ತನೆಂದು/ ನಿರ್ದೋಷಿ ಎಂದು ಘೋಷಣೆ ಮಾಡಿದೆ. ಮಾಹಿತಿಗೆ ತೀರ್ಪಿನ ಪ್ರತಿ ಲಗತ್ತಿಸಿದೆ.ಅಡಕ-3;
2. ಹಾಲಿ ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ ಸಚಿವಾಲಯ ಇವರು 2019ರಲ್ಲಿ ದಾಖಲಿಸಿದ್ದ ಕ್ರಿಮಿನಲ್ ಕೇಸ್ ನಂ.56/2019, ಪ್ರಕರಣದಲ್ಲಿ ವಿಧಾನಸೌಧ ಪೊಲೀಸ್ ಠಾಣೆ, ಬೆಂಗಳೂರು ಇವರು ಸಮಗ್ರ ತನಿಖೆ ನಡೆಸಿ, 4th Addl.CMM Court, Bangalore ನ್ಯಾಯಾಲಯಕ್ಕೆ "B" ವರದಿ ಸಲ್ಲಿಸಿರುತ್ತಾರೆ; ಮಾಹಿತಿಗೆ ತೀರ್ಪಿನ ಪ್ರತಿ ಲಗತ್ತಿಸಿದೆ.ಅಡಕ-4;
3. ಸಚಿವಾಲಯದ ಸಹೋದ್ಯೋಗಿಗಳೇ ಶಾಮಿಲಾಗಿ, ಶ್ರೀ ಜಯಕುಮಾರ್ ಹೀರೆಮಠ್ ಎಂಬುವವರಿಂದ ಕರ್ನಾಟಕ ಲೋಕಾಯುಕ್ತ ಕಛೇರಿಯಲ್ಲಿ 2017ರಲ್ಲಿ ನನ್ನ ಮತ್ತು ನನ್ನ ಕುಟುಂಬದ ವಿರುದ್ಧ ದೂರು No. Complaint/Lok/BCD/527/2017/pp ದಾಖಲಿಸಿದ್ದರು. ಮಾನ್ಯ ಲೋಕಾಯುಕ್ತರು ಮತ್ತು ಲೋಕಾಯುಕ್ತ ಪೊಲೀಸ್‌ನವರು ಸಮಗ್ರ ತನಿಖೆ ನಡೆಸಿರುತ್ತಾರೆ.ಅತಿಮವಾಗಿ ಮಾನ್ಯ ಲೋಕಾಯುಕ್ತರು ದಿನಾಂಕ 18-10-2021ರಂದು ಪ್ರಕರಣದ ತನಿಖೆಯನ್ನು ಮುಕ್ತಾಯಗೊಳಿಸಿರುತ್ತಾರೆ. ಮಾಹಿತಿಗೆ ತೀರ್ಪಿನ ಪ್ರತಿ ಲಗತ್ತಿಸಿದೆ.ಅಡಕ-5;

ನಾನು ಪರಿಶಿಷ್ಟ ಜಾತಿಯಅಧಿಕಾರಿ. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ ಈ ಹುದ್ದೆಗೆ ಏರಿದ್ದನ್ನು ಸಹಿಸದೆ, ಜಾತಿ ದ್ವೇಷದಿಂದ ನಿರಂತರವಾಗಿ ಸವರ್ಣಿಯರು ಸಚಿವಾಲಯದ ಆಡಳಿತವನ್ನು ದುರಪಯೋಗಪಡಿಸಿಕೊಂಡು ಕಿರುಕುಳ ನೀಡುತ್ತಾ, ಸುಳ್ಳು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿ, ಕ್ರಿಮಿನಲ್ ಕೇಸ್‌ಗಳಿವೆ ಇತ್ಯಾದಿಯಾಗಿ ಅಪಪ್ರಚಾರ ಮಾಡುತ್ತಾ, ನನಗೆ ಮತ್ತು ನನ್ನ ಕುಟುಂಬಕ್ಕೆ ಹಿಂಸೆ ನೀಡಿರುತ್ತಾರೆ. ಮೇಲಿನ ಪ್ರಕರಣಗಳಿಂದ ನಾನು ದೋಷಮುಕ್ತ/ನಿರ್ದೋಷಿಯಾಗಿರುತ್ತೇನೆ. ಆದಾಗ್ಯೂಅಪಪ್ರಚಾರಗಳು ಮುಂದುವರೆದಿವೆ.

(ಎಸ್. ಮೂರ್ತಿ)

ಅನುಬಂಧ-1

# ಕರ್ನಾಟಕ ವಿಧಾನಸಭೆ ಸಚಿವಾಲಯ

**ವಿಷಯ:** 2016 ಮತ್ತು 2017ನೇ ಸಾಲುಗಳಲ್ಲಿ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆದ ಅಧಿವೇಶನದ ಸಂಬಂಧ ಮಾಡಲಾದ ತಯಾರಿಯಲ್ಲಿ ನಡೆಸಲಾಗಿರುವ ಅವ್ಯವಹಾರದ ಆರೋಪಗಳಿಗೆ ಸಂಬಂಧಿಸಿದಂತೆ ಶ್ರೀ ಎಸ್.ಮೂರ್ತಿ, ಕಾರ್ಯದರ್ಶಿ (ಅಮಾನತ್ತು), ಕವಿಸಸ ಇವರ ವಿರುದ್ಧ ಶಿಸ್ತು ಕ್ರಮ-ದಂಡನೆ ವಿಧಿಸುವ ಬಗ್ಗೆ.

**ಓದಲಾಗಿದೆ:**
1) ಆದೇಶ ಸಂಖ್ಯೆ:ಕವಿಸಸ/ಆ-3/51/ಸೇ.ಅ/2018, ದಿನಾಂಕ:27.12.2018
2) ನೋಟಿಸ್ ಸಂಖ್ಯೆ: ಕವಿಸಸ/ಆ-3/ಎಸ್.ಪಿ.ಕೆ/744/2018-19, ದಿನಾಂಕ:02.02.2019
3) ದಿನಾಂಕ:26.02.2019ರ ಆದೇಶಗಳ ಸಂಖ್ಯೆ: ಕವಿಸಸ/ಆ-3/6/ಇ.ವಿ/ವಿಅನೇ/2019 ಮತ್ತು ಕವಿಸಸ/ಆ-3/7/ಇ.ವಿ/ಮಂಅನೇ/2019
4) ಆದೇಶ ಸಂಖ್ಯೆ: ಕವಿಸಸ/ಆ-3/744/ಇ.ವಿ.ಮುಂ/2021, ದಿನಾಂಕ:06.05.2021
5) ಇಲಾಖಾ ವಿಚಾರಣಾಧಿಕಾರಿಯವರ ಪತ್ರ ಸಂಖ್ಯೆ: SPLOCA/ADM/GEN/42/2021, ದಿನಾಂಕ: 18.12.2021
6) ಈ ಸಚಿವಾಲಯದ ಪತ್ರ ಸಂಖ್ಯೆ: ಕವಿಸಸ/ಆ-3/02/ಇ.ವಿ.ವ/2022, ದಿನಾಂಕ:20.01.2022

* * * * *

**ಪ್ರಸ್ತಾವನೆ:**

2016 ಹಾಗೂ 2017ನೇ ಸಾಲಿನಲ್ಲಿ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆದ ಚಳಿಗಾಲದ ಅಧಿವೇಶನದ ಸಂಬಂಧ ಭರಿಸಲಾದ ಖರ್ಚುವೆಚ್ಚಗಳಲ್ಲಿ ಅವ್ಯವಹಾರವಾಗಿದೆ ಎಂಬ ದೂರುಗಳು ಬಂದ ಹಿನ್ನೆಲೆಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನಾ ಮತ್ತು ಲೆಕ್ಕಪತ್ರ ಇಲಾಖೆಯ ಹಿರಿಯ ಅಧಿಕಾರಿಗಳ ತಂಡದಿಂದ ಸಮಗ್ರ ತನಿಖೆಯನ್ನು ಕೈಗೊಂಡು ವರದಿಯನ್ನು ಪಡೆದುಕೊಳ್ಳಲಾಗಿತ್ತು. ಸದರಿ ವರದಿಯ ಆಧಾರದ ಮೇಲೆ ವಿಧಾನಸಭೆ ಸಚಿವಾಲಯದ ಕಾರ್ಯದರ್ಶಿಯಾದ ಶ್ರೀ ಎಸ್.ಮೂರ್ತಿ ಇವರನ್ನು ಗುರುತರ ಕರ್ತವ್ಯಲೋಪ ಹಾಗೂ ನಡತೆ ನಿಯಮಾವಳಿಗಳ ನಿಯಮ 3ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡುಬಂದ ಹಿನ್ನೆಲೆಯಲ್ಲಿ ಶಿಸ್ತು ಹಾಗೂ ನೇಮಕಾತಿ ಪ್ರಾಧಿಕಾರವಾದ ವಿಧಾನಸಭೆಯ ಮಾನ್ಯ ವಿಶೇಷ ಮಂಡಳಿಯು 2003ನೇ ಇಸವಿಯ ಕರ್ನಾಟಕ ವಿಧಾನಸಭೆ ಸಚಿವಾಲಯದ (ನೇಮಕಾತಿ ಹಾಗೂ ಸೇವಾ ಷರತ್ತುಗಳು) ನಿಯಮಾವಳಿಗಳ ನಿಯಮ 8 ಮತ್ತು 9 (ಒ) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 10ರನ್ವಯ ಉಲ್ಲೇಖ (1)ರ ಆದೇಶದಲ್ಲಿ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು.

2......

ಮೇಲೆ ಓದಲಾದ ಕ್ರ.ಸಂ: (2)ರಲ್ಲಿ ಆರೋಪಿತ ಅಧಿಕಾರಿಯವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಜಾರಿಗೊಳಿಸಿ, ಅಗತ್ಯ ವಿಧಾನಗಳನ್ನು ಅನುಸರಿಸಲಾಗಿರುತ್ತದೆ. ನಂತರ ಪ್ರಕರಣದ ಸತ್ಯಾಸತ್ಯತೆಗಳನ್ನು ಕಂಡುಕೊಳ್ಳುವ ದೃಷ್ಟಿಯಿಂದ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 11ರ ಉಪನಿಯಮ 5(ಸಿ) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೇಲೆ ಓದಲಾದ ಕ್ರ.ಸಂ: (3)ರಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಲು ಶ್ರೀ ಅಜಯ್ ಸೇಠ್, ಭಾಆಸೇ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಬಿ.ಎಂ.ಆರ್.ಸಿ.ಎಲ್ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ಶ್ರೀ ಕೆ.ವಿ.ನರಸಿಂಹನ್, ಹಿರಿಯ ವಕೀಲರು ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಿದ ನಂತರ ಶ್ರೀ ಅಜಯ್ ಸೇಠ್, ಭಾಆಸೇ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಬಿ.ಎಂ.ಆರ್.ಸಿ.ಎಲ್ ರವರು ತಮ್ಮ ಸೇವೆಯನ್ನು ಕೇಂದ್ರ ಸರ್ಕಾರವು ಪಡೆದಿರುವುದರಿಂದ ಇಲಾಖಾ ವಿಚಾರಣೆಯನ್ನು ಪೂರ್ಣಗೊಳಿಸಲು ಸಾಧ್ಯವಾಗುವುದಿಲ್ಲವೆಂದು ಕೋರಿದ್ದ ಹಿನ್ನೆಲೆಯಲ್ಲಿ, ಮೇಲೆ ಓದಲಾದ ಕ್ರ.ಸಂ: (4)ರ ಆದೇಶದಲ್ಲಿ ಇಲಾಖಾ ವಿಚಾರಣೆಯನ್ನು ಮುಂದುವರೆಸಲು ಶ್ರೀ ಹರ್ಷ ಗುಪ್ತ, ಭಾ.ಆ.ಸೇ, Special Officer and Competent Authority IMA, Bengaluru ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಅದರಂತೆ, ವಿಚಾರಣಾಧಿಕಾರಿಯವರು ಇಲಾಖಾ ವಿಚಾರಣೆಯನ್ನು ಪೂರ್ಣಗೊಳಿಸಿ, ಮೇಲೆ ಓದಲಾದ ಕ್ರ.ಸಂ: (5)ರ ಪತ್ರದೊಂದಿಗೆ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ ಹಾಗೂ ಸದರಿ ವರದಿಯಲ್ಲಿ ಅವರು ಆರೋಪಿತ ಅಧಿಕಾರಿಯವರ ವಿರುದ್ಧ ಮಾಡಲಾದ ಎಲ್ಲಾ ಆರೋಪಗಳು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆಂದು ತಿಳಿಸಿರುತ್ತಾರೆ. ನಿಯಮಾನುಸಾರ ಕ್ರ.ಸಂ: (6)ರಲ್ಲಿ ಓದಲಾದ ಪತ್ರದೊಂದಿಗೆ ವಿಚಾರಣಾ ವರದಿಯ ಪ್ರತಿಯೊಂದನ್ನು ಆರೋಪಿತ ಅಧಿಕಾರಿಯವರಿಗೆ ಕಳುಹಿಸಿ, ಅವರ ಆಕ್ಷೇಪಣೆ/ಹೇಳಿಕೆಗಳೇನಾದರೂ ಇದ್ದಲ್ಲಿ ಸಲ್ಲಿಸುವಂತೆ ಸೂಚಿಸಲಾಗಿತ್ತು. ಸದರಿ ಆರೋಪಿತ ಅಧಿಕಾರಿಯವರು ಮೇಲ್ಕಂಡ ವಿಚಾರಣಾ ವರದಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಆದರೆ ಆರೋಪಗಳ ನಿರಾಕರಣೆಗೆ ಪೂರಕವಾದ ಯಾವುದೇ ಅಗತ್ಯ ದಾಖಲೆಗಳನ್ನು ಒದಗಿಸಿರುವುದಿಲ್ಲ ಹಾಗೂ ದೋಷಾರೋಪಣೆಗೆ ಸಂಬಂಧಿಸಿದಂತೆ ಹೊಸದಾಗಿ ಯಾವುದೇ ಕಾನೂನಾತ್ಮಕ ಅಂಶಗಳನ್ನು ಪ್ರಸ್ತಾಪಿಸಿರುವುದಿಲ್ಲ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿದ ಶಿಸ್ತು ಪ್ರಾಧಿಕಾರವಾದ ಮಾನ್ಯ ವಿಶೇಷ ಮಂಡಳಿಯು ಆರೋಪಿತ ಅಧಿಕಾರಿಯವರ ವಿರುದ್ಧ ಹೊರಿಸಲಾದ ಎಲ್ಲಾ ಆರೋಪಗಳು ನಿಸ್ಸಂದೇಹವಾಗಿ ಸಾಬೀತಾಗಿರುವುದರಿಂದ ಹಾಗೂ ಅವರು ವಿಚಾರಣಾ ವರದಿಯ ಕುರಿತು ಸಲ್ಲಿಸಿರುವ

3.....

ಆಕ್ಷೇಪಣೆಗಳು/ಹೇಳಿಕೆಗಳು ಸಮರ್ಥನೀಯವಾಗಿಲ್ಲದಿರುವುದರಿಂದ, ಅದನ್ನು ಒಪ್ಪಿರುವುದಿಲ್ಲ. ಮುಂದುವರೆದು, ಸರ್ಕಾರಿ ಸೇವೆಯಲ್ಲಿದ್ದ ಇವರು ದುರ್ನಡತೆಯಿಂದ ಮತ್ತು ಸರ್ಕಾರಿ ನೌಕರರಿಗೆ ತಕ್ಕದ್ದಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಸಾಬೀತಾಗಿರುವುದರಿಂದ ಶ್ರೀ ಎಸ್.ಮೂರ್ತಿ, ಕಾರ್ಯದರ್ಶಿ (ಅಮಾನತ್ತು) ಇವರಿಂದ ಕರ್ನಾಟಕ ರಾಜ್ಯ ಸಿವಿಲ್ ಸೇವಾ (ನಡತೆ) ನಿಯಮಾವಳಿಗಳ ನಿಯಮ 3ರ ಉಲ್ಲಂಘನೆಯಾಗಿರುವುದನ್ನು ಖಚಿತಪಡಿಸಿಕೊಂಡಿರುತ್ತದೆ. ಈ ಪ್ರಕರಣವನ್ನು ಎಲ್ಲಾ ಆಯಾಮಗಳಲ್ಲಿಯೂ ಸೂಕ್ಷ್ಮವಾಗಿ ಪರಿಶೀಲಿಸಿದ ಶಿಸ್ತು ಪ್ರಾಧಿಕಾರವು ಸದರಿ ದುರ್ನಡತೆಗೆ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 8 (v)(ಬಿ) ಅಡಿಯಲ್ಲಿ ಶ್ರೀ ಎಸ್.ಮೂರ್ತಿ, ಕಾರ್ಯದರ್ಶಿ (ಅಮಾನತ್ತು) ಇವರು ಪ್ರಸ್ತುತ ಹೊಂದಿರುವ ಕಾರ್ಯದರ್ಶಿ ಹುದ್ದೆಯ ಕೆಳಗಿರುವ ಮೂರನೇ ದರ್ಜೆಯ ಹುದ್ದೆಗೆ, ಅಂದರೆ ಅಧೀನ ಕಾರ್ಯದರ್ಶಿ ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಿಂಬಡ್ತಿ ನೀಡಲು ಆದೇಶಿಸಿರುತ್ತದೆ. ಅಲ್ಲದೆ, ಕೆಳಗಿಳಿಸಿರುವ ಹುದ್ದೆಯಲ್ಲಿ ಈ ಆದೇಶದ ದಿನದಂದು ಅಧೀನ ಕಾರ್ಯದರ್ಶಿ ಹುದ್ದೆಯಲ್ಲಿನ ಜೇಷ್ಠತಾ ಪಟ್ಟಿಯಲ್ಲಿರುವ ಎಲ್ಲಾ ಅಧಿಕಾರಿಗಳ ಜೇಷ್ಠತೆಗಿಂತ ಕಿರಿಯರನ್ನಾಗಿರಿಸಲು ಹಾಗೂ ಅವರಿಗೆ ಅಧೀನ ಕಾರ್ಯದರ್ಶಿ ವೇತನ ಶ್ರೇಣಿಯ ಮೂಲ ವೇತನವನ್ನು ನಿಗದಿಪಡಿಸಲು ಸಹ ಆದೇಶಿಸಿರುತ್ತದೆ. ಆಪಾದಿತರ ಅಮಾನತ್ತಿನ ಅವಧಿಯನ್ನು "ಅಮಾನತ್ತಿನ ಅವಧಿಯೆಂದು" ಪರಿಗಣಿಸಿ ಆದೇಶಿಸಿದೆ. ಮುಂದುವರೆದು, ಸದರಿ ಅಧಿಕಾರಿಯವರು ಅಧೀನ ಕಾರ್ಯದರ್ಶಿ ಹುದ್ದೆಯಲ್ಲಿ ಕಾರ್ಯವರದಿ ಮಾಡಿಕೊಂಡ ನಂತರ ಅವರಿಗೆ ಸಚಿವಾಲಯದ ಯಾವುದೇ ಜವಾಬ್ದಾರಿಯುತ ಕಾರ್ಯವನ್ನು ವಹಿಸತಕ್ಕದ್ದಲ್ಲವೆಂದು ಸೂಚಿಸಿರುತ್ತದೆ.

ಅದಕ್ಕಾಗಿ ಈ ಆದೇಶ.

**ಆದೇಶ ಸಂಖ್ಯೆ: ಕವಿಸಸ/ಆ-3/07/ಶಿ.ಕ್ರ/2022,**
**ಬೆಂಗಳೂರು, ದಿನಾಂಕ 21ನೇ ಏಪ್ರಿಲ್, 2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶಿಸ್ತು ಪ್ರಾಧಿಕಾರವಾದ ಮಾನ್ಯ ವಿಶೇಷ ಮಂಡಳಿಯು ವಿಧಾನಸಭೆ ಸಚಿವಾಲಯದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 2003ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 8(v)(ಬಿ) ರೀತ್ಯಾ ಶ್ರೀ ಎಸ್.ಮೂರ್ತಿ, ಕಾರ್ಯದರ್ಶಿ (ಅಮಾನತ್ತು) ಇವರು ಹೊಂದಿರುವ ಕಾರ್ಯದರ್ಶಿ ಹುದ್ದೆಯ ಕೆಳಗಿರುವ ಮೂರನೇ ದರ್ಜೆಯ ಹುದ್ದೆಗೆ, ಅಂದರೆ ಅಧೀನ ಕಾರ್ಯದರ್ಶಿ ಹುದ್ದೆಗೆ ತಕ್ಷಣದಿಂದ

4......

ಜಾರಿಗೆ ಬರುವಂತೆ ಇಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿದೆ. ಮುಂದುವರೆದು, ಅವರಿಗೆ ಕೆಳಗಿಳಿಸಿರುವ ಹುದ್ದೆಯಲ್ಲಿ ಈ ಆದೇಶದ ದಿನದಂದು ಅಧೀನ ಕಾರ್ಯದರ್ಶಿ ಹುದ್ದೆಯಲ್ಲಿನ ಜೇಷ್ಠತಾ ಪಟ್ಟಿಯಲ್ಲಿರುವ ಎಲ್ಲಾ ಅಧಿಕಾರಿಗಳ ಜೇಷ್ಠತೆಗಿಂತ ಕಿರಿಯರನ್ನಾಗಿ ಪರಿಗಣಿಸಲು ಹಾಗೂ ಅವರ ವೇತನವನ್ನು ಅಧೀನ ಕಾರ್ಯದರ್ಶಿ ವೇತನ ಶ್ರೇಣಿಯ ಮೂಲ ವೇತನದಲ್ಲಿ ನಿಗದಿಪಡಿಸಲು ಸಹ ಆದೇಶಿಸಲಾಗಿದೆ.

ಶ್ರೀ ಎಸ್.ಮೂರ್ತಿ, ಕಾರ್ಯದರ್ಶಿ (ಅಮಾನತ್ತು) ಇವರ ಅಮಾನತ್ತಿನ ಅವಧಿಯನ್ನು "ಅಮಾನತ್ತು" ಎಂದೇ ಪರಿಗಣಿಸಲು ಆದೇಶಿಸಿದೆ.

ವಿಶೇಷ ಮಂಡಳಿಯ ಆದೇಶಾನುಸಾರ,

(ಎಂ.ವಿದ್ಯಾಶ್ರೀ)
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ ಸಚಿವಾಲಯ

2/4/22

ಗೆ,

ಶ್ರೀ ಎಸ್.ಮೂರ್ತಿ, ಕಾರ್ಯದರ್ಶಿ (ಪ್ರಸ್ತುತ ಅಮಾನತ್ತಿನಲ್ಲಿರುವ), ಕರ್ನಾಟಕ ವಿಧಾನಸಭೆ ಸಚಿವಾಲಯ, ಫ್ಲಾಟ್ ಸಂಖ್ಯೆ: 301, 2ನೇ ಮಹಡಿ, ಓಂ ಶಕ್ತಿ ಅಪಾರ್ಟ್‌ಮೆಂಟ್, ಹೆಚ್.ಎಂ.ಟಿ, ಲೇಔಟ್, 80 ಅಡಿ ರಸ್ತೆಯ ಕೊನೆಗೆ, ಆರ್.ಟಿ.ನಗರ, ಬೆಂಗಳೂರು-560 032.

ಪ್ರತಿಗಳು:

1. ಮಹಾಲೇಖಪಾಲರು (ಎ&ಇ), ಕರ್ನಾಟಕ, ಬೆಂಗಳೂರು.
2. ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿ, ಕವಿಸ.
3. ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರ ಸಲಹೆಗಾರರು, ಕವಿಸ.
4. ವಿಧಾನ ಸಭೆಯ ಮಾನ್ಯ ಉಪ ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿ, ಕವಿಸ.
5. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಆಡಳಿತ ಶಾಖೆ-1&3, ಕವಿಸಸ.
7. ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಆಡಳಿತ ಶಾಖೆ-2, ಕವಿಸಸ.
8. ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಲೆಕ್ಕಪತ್ರ ಶಾಖೆ-3, ಕವಿಸಸ.
9. ಕಾರ್ಯದರ್ಶಿ(ಕಾ/ಭಾ)ಯವರ ಆಪ್ತ ಸಹಾಯಕರು, ಕವಿಸಸ.
10. ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತಕ್ಕೆ/ಬಿಡಿ ಪ್ರತಿ.

ಅನೆಕ್ಸ್-2

# ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 01 PGB 2023

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 11.01.2023

RPAD

**ಇವರಿಂದ:**
ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ-ಆಡಳಿತ)
ಬಹುಮಹಡಿ ಕಟ್ಟಡ, ಬೆಂಗಳೂರು-560001.

**ಇವರಿಗೆ:**
ಕಾರ್ಯದರ್ಶಿ ,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

**ವಿಷಯ:** ಶ್ರೀ ಎಸ್.ಮೂರ್ತಿ ಇವರ ಮೇಲ್ಮನವಿ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಎಸ್.ಮೂರ್ತಿ, ಇವರು ಗೌರವಾನ್ವಿತ ರಾಜ್ಯಪಾಲರು ಹಾಗೂ ಮೇಲ್ಮನವಿ ಪ್ರಾಧಿಕಾರಕ್ಕೆ ದಿನಾಂಕ: 11-05-2022ರಂದು ಸಲ್ಲಿಸಿರುವ ಮೇಲ್ಮನವಿ ಮೂಲ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,
K. Susheela 11/1/2023
(ಕೆ.ಸುಶೀಲ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ-ಆಡಳಿತ)
(ದೂರುಗಳು ಮತ್ತುಕುಂದುಕೊರತೆಗಳು)

**ಪ್ರತಿ:**
ಶ್ರೀ ಎಸ್.ಮೂರ್ತಿ, ಫ್ಲಾಟ್ ನಂ:301, 2ನೇ ಮಹಡಿ, ಓಂ ಶಕ್ತಿ ಅಪಾರ್ಟ್‌ಮೆಂಟ್, ಹೆಚ್‌ಎಂಟಿ ಲೇಔಟ್, ಆರ್ ಟಿ ನಗರ, ಬೆಂಗಳೂರು- 560 032.

IN THE COURT OF THE I ADDL.CMM: BANGALORE

Dated this the 6th day of August 2015.

**Present: Sri Krishna Prasad Rao Kalmady, B.A.,LL.B., I Addl.C.M.M.,Bangalore.**

JUDGMENT U/s.355 Cr.P.C.

| | | |
|---|---|---|
| Case No. | : | C.C.No.22279/2008 |
| Date of Offence | : | 17-2-2008 |
| Name of complainant | : | State by Thyagaraja Nagar Police Station (COD, SE), Bangalore) |
| Name of Accused | : | 1.Shekar, S/o Annegowda, aged 34 years, Editor of "Ratna Jyoti" Newspaper, residing at No.985/A, 10th Cross, 2nd floor, SBM Colony, Banashankari 1st Stage, Bangalore 560 085<br><br>2.Vittal Prasad S/o Balaram Prasad, aged 32 years, Advocate, residing at No.19, 2nd Main, Palace Guttahalli, Vyalikaval, Bangalore.<br><br>3.S.Murthy, S/o late K.Siddaiah, aged 40 years, |

...llowing.

## O R D E R

Acting under Section 248(1) Cr.P.C. I hold that, accused Nos.1 and 2 are not found guilty of having committed the offences punishable under Sections 448, 506 and 114 of IPC and accused No.3 is not found guilty of having committed the

offences punishable under Sections 506 and 114 of IPC.

Accused Nos.1 to 3 are hereby acquitted of the offences alleged against them and they are set at liberty forthwith.

The bail bonds executed by the accused Nos.1 to 3 and their sureties stand cancelled.

(Dictated to the stenographer, directly on computer, typed by her, revised and then corrected by me and then pronounced in open court on this the 6th day of August 2015).

6/8/15

**(Krishna Prasad Rao Kalmady)**
**I Addl.CMM, Bangalore.**

ಅಡಕ-4

ರಾಜ್ಯ ಪೊಲೀಸ್

ಅಂತಿಮ ವರದಿ / ಚಾರ್ಜ್ ಶೀಟ್ ನಮೂನೆ

(ಕಲಂನ ಅಡಿಯಲ್ಲಿ 173 Cr.P.C)

ನ್ಯಾಯಾಲಯದ ಮುಂದೆ 4th Addl.CMM Court,Nrupatunga Road,

1. ಜಿಲ್ಲೆ : Bengaluru City ವೃತ್ತ/ಉಪವಿಭಾಗ : Cubban Park. Sub division ಪೊಲೀಸ್ ಠಾಣೆ :Vidhana Soudha

2. ಅಪರಾಧ ಸಂಖ್ಯೆ:0056/2019 ದಿನಾಂಕ : 27/07/2019

3. ಅಂತಿಮ ವರದಿ / ಚಾರ್ಜ್ ಶೀಟ್ ಸಂಖ್ಯೆ: 56/2019 , ಅಂತಿಮ ವರದಿ ದಿನಾಂಕ: 20/11/2020

Check & Put Up
IV A.C.M.M. 18/12

4. ವಿಳಂಬಕ್ಕೆ ಕಾರಣ(ವಿಳಂಬವಾಗಿದ್ದಲ್ಲಿ ಮಾತ್ರ)

5. (i) ಕಲಂ / ಕಾಯ್ದೆ

IPC 1860 U/s: 426,406

ii) ಅಪರಾಧಿಯ ಮೇಲೆ ಚಾರ್ಜ್ ಶೀಟನ್ನು ಕೇಸು ದಾಖಲಾದಾಗ ಹಾಕಿದ ಕಾಯ್ದೆ ಮತ್ತು ಕಲಂ ನಂತೆ ಹಾಕಿದೆಯೇ ಅಥವಾ ಕಾಯ್ದೆ ಕಲಂ ಅನ್ನು ಬದಲಾಯಿಸಿಯೇ/ಕೈಬಿಡಲಾಗಿದೆಯೇ.

iii) ಮುಂದಿನ ತನಿಖೆಯನ್ನು ನಡೆಸದಿರುವುದಕ್ಕೆ ಕಾರಣಗಳು

ಬಿ ಅಂತಿಮ ವರದಿಯನ್ನು ಸಲ್ಲಿಸಿದೆ

6. ಅಂತಿಮ ವರದಿಯ ಸ್ವರೂಪ: : B Report

7. ನಡೆಯದಿದ್ದಲ್ಲಿ : False/Unoccured

8. ಹೆಚ್ಚುವರಿಯೇ ಅಥವಾ ಮೂಲದ್ದೇ : Original

9. ತನಿಖಾಧಿಕಾರಿಗಳ ಹೆಸರು : NAGARAJU K T ಹುದ್ದೆ PI

10. a)ಪಿರ್ಯಾದುದಾರರ ಹೆಸರು : M K VISHALAKSHI

b)ಸಂಬಂಧಿಕರ ಹೆಸರು ಮತ್ತು ಸಂಬಂಧ :

c) ಸಂಬಂಧ

d)ವಿಳಾಸ SECRATARY(I/c) KARNATAKA LEGISLATIVE ASSEMBLY, #121, 1ST FLOOR

7

ವೃತ್ತನಿರೀಕ್ಷಕರ ಪರಾ ಮತ್ತು ನ್ಯಾಯಾಧೀಶರಿಗೆ ಕಳುಹಿಸಿದ ದಿನಾಂಕ

[illegible]

[illegible]

ನ್ಯಾಯಾಲಯಕ್ಕೆ ಬಿ ಅಂತಿಮ ವರದಿ ಸಲ್ಲಿಸಲು ಅನುಮತಿ ನೀಡಿದ

Transmission Date :20/11/2020

ತನಿಖಾಧಿಕಾರಿಯ ಸಹಿ,

ಹೆಸರು NAGARAJU K T

ಹುದ್ದೆ

ಪೊಲೀಸ್ ಇನ್ಸ್‌ಪೆಕ್ಟರ್
ವಿಧಾನಸೌಧ ಪೊಲೀಸ್ ಠಾಣೆ
ಬೆಂಗಳೂರು ನಗರ - 560 001

COURT OF THE CHIEF METROPOLITAN MAGISTRATE

ಅಡಿಕೆ-೮

# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೆಂಟ್/ಲೋಕ್/ಬಿಸಿಡಿ/527/2017/ಪಿ.ಪಿ.

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು-560001.
ದೂರವಾಣಿ: 22011032
ಫ್ಯಾಕ್ಸ್ ಸಂಖ್ಯೆ.22258284/22375098.
ದಿನಾಂಕ: 25/10/2021.

## ಹಿಂಬರಹ

**ವಿಷಯ:** ಶ್ರೀ. ಜಯಕುಮಾರ್ ಹಿರೇಮಠ್, ಪಾಪರೆಡ್ಡಿಪಾಳ್ಯ, ನಾಗರಭಾವಿ, ಬೆಂಗಳೂರು ರವರು ತಮ್ಮ ವಿರುದ್ಧ ಸಲ್ಲಿಸಿರುವ ದೂರಿನ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗೌರವಾನ್ವಿತ ಲೋಕಾಯುಕ್ತರವರ ದಿನಾಂಕ 18/10/2021 ರ ಆದೇಶದಂತೆ, ಈ ಪ್ರಕರಣದ ತನಿಖೆಯನ್ನು ಮುಕ್ತಾಯಗೊಳಿಸಲಾಗಿದೆ ಎಂಬ ಮಾಹಿತಿಯನ್ನು ತಮಗೆ ತಿಳಿಸಲು ಗೌರವಾನ್ವಿತ ಲೋಕಾಯುಕ್ತರವರಿಂದ ನಿರ್ದೇಶಿಸಲ್ಪಟ್ಟಿದ್ದೇನೆ.

ಗೌರವಾನ್ವಿತ ಲೋಕಾಯುಕ್ತರವರ ಆದೇಶದ ಪ್ರತಿಯನ್ನು ಲಗತ್ತಿಸಲಾಗಿದೆ.

ಸಾರ್ವಜನಿಕ ಅಭಿಯೋಜಕರು,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

ಇವರಿಗೆ:
ಶ್ರೀ. ಎಸ್. ಮೂರ್ತಿ,
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ ಸಚಿವಾಲಯ,
ನಂ.301, 2ನೇ ಮಹಡಿ,
"ಓಂ ಶಕ್ತಿ ಅಪಾರ್ಟ್‌ಮೆಂಟ್"
ಹೆಚ್.ಎಂ.ಟಿ. ಕಾಲೋನಿ,
80 ಅಡಿ ರಸ್ತೆ ಕೊನೆ,
ಆರ್.ಟಿ. ನಗರ,
ಬೆಂಗಳೂರು-560024.